# ಗುಲಾಬಿ ಗ್ಯಾಂಗ್

ಶಿವಶರಣರು ಹೆಣ್ಣಿನ ಬಗ್ಗೆ, ಸೂತಕಗಳ ಬಗ್ಗೆ ಪೂರ್ವಗ್ರಹಗಳಿಲ್ಲದೆ ಚಿಂತಿಸಿದರು. ಹೆಣ್ಣನ್ನು ಸಹಜೀವಿಯಾಗಿ ಕಾಣುವುದರ ಹಿಂದೆ ಸಮಸಮಾಜದ ಕಲ್ಪನೆ ಎದ್ದು ತೋರುತ್ತಿತ್ತು. ಶರೀರದ ಪ್ರಾಕೃತಿಕ ವ್ಯತ್ಯಾಸಗಳಿಂದಾಗಿ ಹೆಣ್ಣು ಗಂಡೆಂಬ ವ್ಯತ್ಯಾಸವೇ ವಿನಹ ಒಳಗೆ ಸುಳಿವ ಆತ್ಮಕ್ಕೆ ಲಿಂಗಭೇದವಿಲ್ಲವೆಂದರು. 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದೆಡೆ ಗಂಡೆಂಬರು, ಈ ಉಭಯದ ಜ್ಞಾನ ಹೆಣ್ಣೋ, ಗಂಡೋ ನಾಸ್ತಿನಾಥ' ಎಂದು ವಚನಕಾರ್ತಿ ಗೊಗ್ಗವ್ವೆ ನುಡಿಯುತ್ತಾಳೆ.

ನಾವು ಸಂಚಿ ಹೊನ್ನಮ್ಮ 'ಹದಿಬದೆಯ ಧರ್ಮ' ಬೋಧಿಸಿದಳು ಎಂದು ನಿಸೂರಾಗಿ ನುಡಿಯುತ್ತೇವೆ. ಆಕೆ ಕೇವಲ ಗೃಹಿಣಿಯನ್ನು ಕುರಿತ ಸಾಂಪ್ರದಾಯಿಕ ಗೃಹಸ್ಥ ಧರ್ಮ ಹೇಳುವುದಿಲ್ಲ. ಮದುವೆಯಾಗಿ ಬಂದ ಹೆಂಡತಿಯನ್ನು ಗಂಡನಾದವನು ಹೇಗೆ ನೋಡಿಕೊಳ್ಳಬೇಕು ಎಂಬುದನ್ನೂ ಹೇಳುತ್ತಾಳೆ. ಹೊಸದಾಗಿ ಮನೆಗೆ ಬಂದ ಹೆಣ್ಣಿಗೆ ಅತ್ತೆ, ಮಾವ, ಕುಟುಂಬದವರೆಲ್ಲರೂ ಅಪರಿಚಿತರೇ ಆಗಿರುತ್ತಾರೆ. ಇಂತಹ ವಾತಾವರಣದಲ್ಲಿ ಗಂಡ ಹೆಂಡತಿಗೆ ಸಖನಾಗಬೇಕು. ಸಖನಾಗದೆ ದರ್ಪತೋರಿದರೆ ಆಕೆ ಅರಳುವ ಬದಲು ಮುದುಡಿಹೋಗುತ್ತಾಳೆ. ಅದನ್ನು ಹೊನ್ನಮ್ಮ 'ಉಗುರೊಳು ಭಾಜಿಪ ವೀಣೆಗೆ ಒನಕೆಗೊಂಬ ತೆರನಂತೆ' ಎನ್ನುತ್ತಾಳೆ.

ಪುರಾತನ ಕಾಲವನ್ನೂ ಒಳಗೊಂಡಂತೆ ಇಂದೂ ಕೂಡ ಹೆಣ್ಣಿನ ಬಗೆಗಿನ ದೃಷ್ಟಿಕೋನಗಳೇನೂ ಬದಲಾಗಿಲ್ಲ. ಭಾರತೀಯರ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು, ಗಂಡಿನ ಸಂರಚನೆ ಕುರಿತಂತೆ ಚಿತ್ರ ವಿಚಿತ್ರ ನಂಬಿಕೆಗಳಿವೆ. ಆದಿಯಲ್ಲಿ ಕುಶಲಕರ್ಮಿ ಗಂಡು ಹೆಣ್ಣನ್ನು ಸೃಷ್ಟಿಸುವ ಸಂದರ್ಭದಲ್ಲಿ ತನ್ನಲ್ಲಿರುವ ಉತ್ತಮ ಸಾಮಗ್ರಿಗಳೆಲ್ಲವನ್ನೂ ಬಳಸಿ ಮೊದಲು ಗಂಡನ್ನು ಸೃಷ್ಟಿಸುತ್ತಾನೆ. ಅಳಿದುಳಿದ ಪರಿಕರಗಳಿಂದ, ಚಿತ್ರವಿಚಿತ್ರ ವಸ್ತುಗಳಿಂದ ಹೆಣ್ಣನ್ನು ಸೃಷ್ಟಿಸುತ್ತಾನೆ. ಚಂದ್ರನ ದುಂಡನೆಯ ಆಕಾರ, ಬಳ್ಳಿಗಳ ಬಾಗು ಬಳುಕು, ಕಮಲದ ಮುಖ, ಆನೆಯ ಸೊಂಡಿಲಿನ ಸಣ್ಣ ಹಾಗೂ ದೊಡ್ಡದಾದ ಭಾಗಗಳು, ಎಲೆಗಳ ಹಗುರ ಭಾರ ಈ ಮುಂತಾದವುಗಳಿಂದ ಹೆಣ್ಣನ್ನು ಸೃಷ್ಟಿಸಿದ. ಜೊತೆಯಲ್ಲಿ ಅಷ್ಟಕ್ಕೇ ಸುಮ್ಮನಾಗದೆ ನವಿಲಿನ ಲಾಸ್ಯ, ದುಂಬಿಯ ಮೊರೆತ, ಹರಿಣಿಯ ಕಣ್ಣು, ನರಿಯ ಮೋಸ, ಹುಲಿಯ ಕ್ರೌರ್ಯ ಹೀಗೆ ಅಂದದ ಜೊತೆಯಲ್ಲಿ ಪಶುಸ್ವಭಾವವನ್ನು ಸೇರಿಸಿದ. ಗಂಡಿನ ಶರೀರವನ್ನು ನೀಳವಾಗಿ, ನೇರವಾಗಿ ಎಂಬಂತೆ ಚಿತ್ರಿಸಿದರೆ, ಹೆಣ್ಣಿನ ಶರೀರ ಅಂಕುಡೊಂಕುಗಳಿಂದಾದ ಕಲಾಕೃತಿ ಎಂಬಂತೆ ಚಿತ್ರಿಸಿದ. ಹೀಗಾಗಿಯೇ ಭಾರತೀಯ ಕಲೆಯಲ್ಲಿ, ವಿಶೇಷವಾಗಿ ಕ್ಯಾಲೆಂಡರ್‌ಗಳಲ್ಲಿ ಹೆಣ್ಣು ದೇವತೆಯಿರಲಿ, ಸಾಮಾನ್ಯಳಿರಲಿ ಅವಳು ಚಿತ್ರಿತಳಾಗುವುದು ಅಂದದ ಬೊಂಬೆಯಾಗಿಯೇ. ಹೆಸರಾಂತ ಕಲಾವಿದ ರವಿವರ್ಮನನ್ನು ಒಳಗೊಂಡಂತೆ ಎಲ್ಲರೂ ಅವಳನ್ನು ಸರಿದ ಸೆರಗು, ಹಾರುವ ಸೆರಗು, ಗಾಳಿಗೆ ತುಯ್ದಾಡುವ ಕೂದಲುಗಳಿಂದ ಗಂಡಿಗೆ ಪ್ರಲೋಭನೆ ಒಡ್ಡುವವಳು ಎಂಬಂತೆಯೇ ಚಿತ್ರಿಸಿದ್ದಾರೆ.

ಸಮಾಜವನ್ನು ವರ್ಣವ್ಯವಸ್ಥೆಯಿಂದ ವಿಂಗಡಿಸಿದ ಮನು ಎಂಬ ಹೆಣ್ಣಿನ ನಡೆನುಡಿಯ ನಿರ್ದೇಶಕನ ವಿಚಾರಗಳು ಪೂರ್ವಗ್ರಹಗಳಿಂದ ಕೂಡಿದ್ದು ಅಚ್ಚರಿ ಹುಟ್ಟಿಸುತ್ತವೆ. ಬಹುಶಃ ಅವನು ಹೆಣ್ಣುಗಳಿಂದ ನಿರಾಕರಿಸಲ್ಪಟ್ಟಿರಬೇಕು. ಅಥವಾ ಹೆಣ್ಣುಗಳಿಂದ ಅಪಮಾನಕ್ಕೆ ಈಡಾಗಿರಬೇಕು. ಈ ನಿರಾಸೆ, ಅಪಮಾನ ಇಡೀ ಹೆಣ್ಣುಕುಲದ ಬಗ್ಗೆ ಸೇಡುಮನೋಭಾವವನ್ನು ಹುಟ್ಟಿಸಿರಬೇಕು. ಅವನು ಗುರುತಿಸುವಂತೆ ಅಪಮಾನದ ಮೂಲ ಹೆಣ್ಣು, ಕಲಹದ ಮೂಲ ಹೆಣ್ಣು, ಲೌಕಿಕದ ಅಸ್ತಿತ್ವದ ಮೂಲ ಹೆಣ್ಣು. ಆದ್ದರಿಂದ ಅವಳನ್ನು ತ್ಯಜಿಸು ಎನ್ನುತ್ತಾನೆ. ಇನ್ನೊಂದೆಡೆ ಒಂದು ಹೆಣ್ಣು ಇಹದಲ್ಲಿ ಮೂರ್ಖನನ್ನೂ ಒಳಗೊಂಡಂತೆ ಋಷಿಯನ್ನೂ ಸಹ ಬಿಡದೆ ಸೆಳೆದು ಕಾಮನೆಗಳ ಅಡಿಯಾಳನ್ನಾಗಿ ಮಾಡಬಲ್ಲಳು. ಇದಕ್ಕೆ ಪೂರಕವೆಂಬಂತೆ ಪತಿಗೆ ಅವಿಧೇಯಳಾಗಿ ವರ್ತಿಸುವ ಪತ್ನಿ ಮುಂದಿನ ಜನ್ಮದಲ್ಲಿ ಗುಳ್ಳೆನರಿಯಾಗಿ ಹುಟ್ಟುತ್ತಾಳೆ. ಇಷ್ಟೆಲ್ಲಾ ಕಟುವಾಗಿ ನುಡಿದ ನಂತರ ಸ್ವಾತಂತ್ರ್ಯದ, ಅಧಿಕಾರದ ನಿರ್ವಹಣೆಯ ಪ್ರಶ್ನೆ ಬಂದಾಗ ಹೆಣ್ಣು ಪತ್ನಿಯಾಗಿ ಆಳದಿದ್ದರೂ ತಾಯಿಯಾಗಿ ಆಳಬಲ್ಲಳು ಎಂದು ಅರೆ ಸಮಾಧಾನಿಸುತ್ತಾನೆ. ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ರಮಿಸಲ್ಪಡುತ್ತಾರೆ ಎಂಬ ಮಾತು ಕೂಡ ಕಣ್ಣು ಒರೆಸುವ ಮಾತಾಗಿಯೇ ಉಳಿಯುತ್ತದೆ.

ಜಗತ್ತಿನ ಬಹುತೇಕ ಮಹಾಕಾವ್ಯಗಳಲ್ಲಿ ಹೆಣ್ಣನ್ನು ಯುದ್ಧದ ಮೂಲವನ್ನಾಗಿಯೇ ನೋಡಲಾಗಿದೆ. ರಾಮಾಯಣ, ಮಹಾಭಾರತ, ಟ್ರೋಜನ್ ವಾರ್ ಒಳಗೊಂಡಂತೆ ಎಲ್ಲ ಕಾವ್ಯಗಳಲ್ಲೂ ಹೆಣ್ಣಿಗಾಗಿಯೇ ಯುದ್ಧ ನಡೆದಿದೆ. ಹೆಣ್ಣಿನ ಘನತೆಯನ್ನು ನಿರಾಕರಿಸುತ್ತಲೇ ಅವಳೆನ್ನುವ ಕೇಂದ್ರದ ಸುತ್ತ ನಡೆಯುವ ವಿದ್ಯಮಾನಗಳು ಬೆರಗು ಹುಟ್ಟಿಸುತ್ತವೆ. ಎಲ್ಲಾ ದೇಶಭಾಷೆಗಳ ಪುರಾಣ ಇತಿಹಾಸಗಳಲ್ಲಿ ಭಾರತವನ್ನು ಒಳಗೊಂಡಂತೆ ಪುರುಷನ ಅಧಿಕಾರ ಕೇಂದ್ರದಲ್ಲಿ ಮಣ್ಣು, ಹೊನ್ನಿನ ಜೊತೆ ಹೆಣ್ಣನ್ನು ಸಹ ಸೇರಿಸಲಾಯಿತು. ಸುಂದರಿಯರಾದ ಹೆಂಡತಿಯರನ್ನು ಕಾಪಾಡಿಕೊಳ್ಳುವುದು ಪ್ರಯಾಸದ ಧರ್ಮವಾಗಿತ್ತು.

ಈ ಎಲ್ಲಾ ಕಲ್ಪಿತಗಳ ಜೊತೆಯಲ್ಲಿಯೇ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿದ ಹೆಣ್ಣುಮಕ್ಕಳು ನಮಗೆ ಮುಖ್ಯರಾಗಿ ತೋರುತ್ತಾರೆ. ಇಂತಹದೊಂದು ಅಗತ್ಯವನ್ನು ಸಂದರ್ಭಗಳೇ ಹುಟ್ಟುಹಾಕುತ್ತವೆ.

ಇತ್ತೀಚೆಗೆ ನಾನು ನೋಡಿದ ರಂಗಪಯಣ ತಂಡ ಪ್ರದರ್ಶಿಸಿದ ನಯನಾ ರಾಜ್ ಗುರು ಅಭಿನಯಿಸಿದ 'ಗುಲಾಬಿ ಗ್ಯಾಂಗ್' ಎಂಬ ನಾಟಕ ಮಹಿಳೆ ತನ್ನ ಅಸ್ತಿತ್ವಕ್ಕಾಗಿ ನಡೆಸುವ ಅಗತ್ಯದ ಕದನವಾಗಿ ತೋರಿತು. ಉತ್ತರಪ್ರದೇಶದ ಬುಂದೇಲ್ಖಂಡ್ ಪ್ರಾಂತ್ಯಕ್ಕೆ ಸೇರಿದ ಸಂಪತ್ಪಾಲ್ ಎಂಬ ಮಹಿಳೆಯ ಸಂಘಟನೆ ಕುರಿತಾದ ಗುಲಾಬಿ ಗ್ಯಾಂಗ್ ಹಲವು ಕಾರಣಕ್ಕಾಗಿ ಇಂದು ಮುಖ್ಯವಾಗಿ ತೋರುತ್ತದೆ. ಒಂದು ದಿನ ಸಂಪತ್ಪಾಲ್ ತನ್ನ ಮನೆಯ ಸಮೀಪದಲ್ಲಿ ಹೆಣ್ಣಿನ ಮೇಲೆ ಹಲ್ಲೆ ನಡೆಯುತ್ತಿದ್ದಾಗ ತಡೆಯಲು ಹೋದಾಗ ಆ ಹಲ್ಲೆಕೋರರು ಅವಳನ್ನು ಅವಮಾನಿಸುತ್ತಾರೆ. ಸಂಪತ್ಪಾಲ್ ಅಲ್ಲಿಂದ ಒಳಗೆ ಹೋಗಿ ಮರಳಿ ಹೊರಬರುವಷ್ಟರಲ್ಲಿ ಅವಳ ಜೊತೆ ನಾಲ್ಕೈದು ಮಹಿಳೆಯರು ಲಾಠಿಗಳೊಂದಿಗೆ ಕಾಣಿಸಿಕೊಳ್ಳುತ್ತಾರೆ. ತನ್ನನ್ನು ಅಪಮಾನಿಸಿದವರಿಗೆ ತಕ್ಕ ಉತ್ತರ ಕೊಟ್ಟ ಸಂಪತ್ಪಾಲ್ ಗುಲಾಬಿ ಗ್ಯಾಂಗ್ ನಾಯಕಿಯಾಗಿ ಹೊರಹೊಮ್ಮುತ್ತಾಳೆ. ಎಲ್ಲೇ ಜಾತಿ ಆಧಾರಿತ ಗಲಭೆಗಳಾಗಲೀ, ಬಾಲ್ಯವಿವಾಹವಾಗಲೀ, ಹೆಣ್ಣಿನ ಮೇಲೆ ದಬ್ಬಾಳಿಕೆ ನಡೆಯಲಿ ಅಲ್ಲಿ ಸಂಪತ್ಪಾಲ್ ತನ್ನ ಸದಸ್ಯರೊಂದಿಗೆ ಲಾಠಿಯೊಂದಿಗೆ ಪ್ರತ್ಯಕ್ಷವಾಗುತ್ತಾಳೆ. ಸೋಶಿಯಲ್ ಆಕ್ಟಿವಿಸ್ಟ್ ಎಂದೇ ಕರೆಸಿಕೊಳ್ಳುವ ಈಕೆ ಸರ್ಕಾರದ ಅಧಿಕಾರಿಗಳಿಂದ ಅನ್ಯಾಯವಾದಾಗಲೂ ತನ್ನ ಗುಲಾಬಿ ಗ್ಯಾಂಗಿನ ಶಕ್ತಿ ಪ್ರದರ್ಶಿಸಿ ಗೆದ್ದಿದ್ದಾಳೆ. ರಾಜಕಾರಣಿ ಹಾಗೂ ಅಧಿಕಾರಿಗಳನ್ನೊಳಗೊಂಡ ಭ್ರಷ್ಟ ವ್ಯವಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ಅಸಹಾಯಕರ ಪರವಾಗಿ ಹೋರಾಟ ಮಾಡುತ್ತಿರುವ ಈಕೆ ವಿಸ್ತರಿಸುತ್ತಿರುವ ಮಹಿಳೆಯರ ಆಶೋತ್ತರಗಳ ಸಂಕೇತವಾಗಿ ತೋರುತ್ತಾಳೆ.

■ **ಅಮೃತಮತಿ**

## ಮಾತೇ ಮುತ್ತು

- ಯಾವ ವಿಶ್ವವಿದ್ಯಾಲಯವೂ ಕಲಿಸಲಾರದಷ್ಟು ಪಾಠವನ್ನು ಬಡತನ ಕಲಿಸುತ್ತದೆ.

  —ಅನಕೃ

- ಹೊರಗೆ ಕಾಣುವ ಬಡತನಕ್ಕಿಂತಲೂ ಮನಸ್ಸಿನ ಬಡತನ ಅಪಾಯಕಾರಿಯಾದುದು.

  —ಎಸ್. ರಾಧಾಕೃಷ್ಣನ್

- ಚುನಾವಣೆ ಎಂಬುದು ಸಂಖ್ಯಾಬಲವಷ್ಟೆ. ಇದೊಂದು ಅಂತಃಕಲಹ.

  —ಶಿವರಾಮ ಕಾರಂತ

- ಭಯಸ್ಥನು ಇತರರನ್ನು ಭಯಗೊಳಿಸುತ್ತಾನೆ.

  —ಮಹಾವೀರ

- ದಬ್ಬಾಳಿಕೆ ಹೆಚ್ಚಾದಾಗ ಪ್ರಜಾಪ್ರಭುತ್ವ ಉದಯಿಸುತ್ತದೆ.

  —ಪ್ಲೇಟೊ

- ಮನೆಯಷ್ಟು ಆಹ್ಲಾದಕರವಾದ ಸ್ಥಳ ಬೇರೊಂದಿಲ್ಲ.

  —ಸಿಸಿರೋ